ದಿನಾಂಕ 22.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ- ಶ್ರೀ.ಎಂ.ಜಿ.ಆರ್. ವಕೀಲರಿಂದಃ-</u>**

ನಾನು 1958 ರಲ್ಲಿ ಜನಿಸಿರುತ್ತೇನೆ. ದಾವಾ ಸ್ವತ್ತುಗಳು ನನ್ನ ತಂದೆ ತಿಮ್ಮಯ್ಯರವರ ಸ್ವಯಾರ್ಜಿತ ಮತ್ತು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆ ದಿಃ 05.11.1994 ರಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ. ವಾದಿಯು ನನ್ನ ತಂದೆಯ ಉತ್ತರಕ್ರಿಯಾಧಿಗಳಲ್ಲಿ ಭಾಗವಹಿಸಿದ್ದರು. 11 ನೇ ದಿನದ ಕಾರ್ಯವನ್ನು ಮುಗಿಸಿ ಒಂದು ವಾರ ಇದ್ದು, ಬಳಿಕ ತನ್ನ ಗಂಡನ ಮನೆಗೆ ವಾದಿಯು ಹೋಗಿರುತ್ತಾರೆ. ನನ್ನ ತಾಯಿ 1998 ರಲ್ಲಿ ಮೃತರಾಗಿರುತ್ತಾರೆ. ನನ್ನ ತಾಯಿಯು ಮೃತರಾದ ಬಳಿಕ ನನ್ನ ಮತ್ತು ವಾದಿಯ ನಡುವೆ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಆಸ್ತಿಯ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ವಾದಿಯ ನಡುವೆ 2003 ರಲ್ಲಿ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತುಗಳಲ್ಲಿ ತನ್ನ ಪಾಲನ್ನು ತನಗೆ ನೀಡುವಂತೆ ನನ್ನ ಬಳಿ ಕೇಳುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ದಾಖಲೆಗಳನ್ನು ಸರಿಪಡಿಸಿಕೊಂಡ ನಂತರ ಪಾಲನ್ನು ನೀಡುವುದಾಗಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. 2013 ನೇ ಇಸವಿಯಲ್ಲಿ ಪುನಃ ವಾದಿಯು ದಾವಾ ಸ್ವತ್ತುಗಳಲ್ಲಿ ತನ್ನ ಹಿಸ್ಸೆ ನೀಡುವಂತೆ ಕೇಳಿದ ಸಂದರ್ಭದಲ್ಲಿ ದಾವಾ ಸ್ವತ್ತುಗಳ ಪಹಣಿಗಳು ನನ್ನ ಹೆಸರಿಗೆ ಬದಲಾವಣೆಯಾಗಿರುವ ಬಗ್ಗೆ ಅವರಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ದಾವೆಯನ್ನು ದಾಖಲಿಸಿದ ಬಳಿಕ ನಾನು ಆಕೆಯೊಂದಿಗೆ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ದಿಃ 23.12.1994 ರಂದು ನಾನು ಮತ್ತು ನನ್ನ ತಾಯಿ ಪೂಣಚ್ಚರವರಿಗೆ ನಿಡಿ. 12 ರಲ್ಲಿ ನಮೂದಿಸಿರುವ ಸ್ವತ್ತುಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಮೂದಿಸಿರುವ ಸ್ವತ್ತುಗಳ ಮೇಲೆ ವಾದಿಗೂ ಸಹ ಹಕ್ಕು

ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಮುಂದುವರೆದ ನನ್ನ ತಂದೆ ಜೀವಿತಾವಾಗಿದ್ದಾಗಲೇ ಸದರಿ ಸ್ವತ್ತುಗಳನ್ನು ಮಾರಾಟ ಮಾಡಿ ಹಣವನ್ನು ಪಡೆದುಕೊಂಡ 15 ದಿನಗಳ ಬಳಿಕ ಮೃತರಾಗಿದ್ದರಿಂದ ನಾವು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿಡಿ. 12 ರಲ್ಲಿರುವ ಸ್ವತ್ತುಗಳನ್ನು ನನ್ನ ತಂದೆಯ ಮಾರಾಟ ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಾನು ವಾದಿಯಿಂದ ಸಾಲವಾಗಿ ಪಡೆದುಕೊಂಡಿದ್ದಂತಹ ಮೂರು ಲಕ್ಷ ಹಣವನ್ನು ಆಕೆಗೆ ಹಿಂತಿರುಗಿಸಿರುತ್ತೇನೆಯೇ ಹೊರತು ಪ್ರೀತಿಯಿಂದ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ. 12 ರ ಕ್ರಯಪತ್ರದ ಪ್ರಕಾರ ಪ್ರತಿಫಲದ ಹಣವನ್ನು ನಾನು ಪೂಣಚ್ಚರವರಿಂದ ಪಡೆದುಕೊಂಡ ಬಳಿಕ ಸಾಲವನ್ನು ವಾದಿಗೆ ಹಿಂತಿರುಗಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ. 29 ಮತ್ತು ನಿಡಿ. 33, ದಿಃ 29.05.1995 ರಂದು ತಯಾರಿಸಲಾಗಿರುತ್ತದೆ ಎಂದರೆ ನಿಡಿ. 33 ದಾಖಲೆಯನ್ನು ಬರೆದುಕೊಟ್ಟ ದಿನಾಂಕ ನನಗೆ ನೆನಪಿದೆ. ಆದರೆ ನಿಡಿ. 29 ರ ದಿನಾಂಕ ನನಗೆ ನೆನಪಿಲ್ಲ. ನಿಡಿ. 33 ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಡಿ. 29 ಮತ್ತು 33 ರ ದಾಖಲೆಗಳನ್ನು ನೋಂದಣಿ ಮಾಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ದಾಖಲೆಗಳನ್ನು ನೋಂದಣಿ ಮಾಡಿಸಿದ್ದರಿಂದ ಈ ದಾಖಲೆಗಳನ್ನು ನೋಂದಣಿ ಮಾಡಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಿಡಿ. 29 ಮತ್ತು 33 ರ ದಾಖಲೆಗಳನ್ನು ವಾದಿಯು ನನಗೆ ಬರೆದುಕೊಡದೆ ಇದ್ದುದ್ದರಿಂದ ಸದರಿ ದಾಖಲೆಗಳನ್ನು ನೋಂದಣಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ. 32 ದಾಖಲೆಯನ್ನು ಸಹ ವಾದಿಯ ಬರೆದುಕೊಡದೇ ಇದ್ದರೂ ಸಹ ಅದನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ವಾದಿಗೆ ದಾವಾ ಸ್ವತ್ತುಗಳಲ್ಲಿ ಅರ್ಧ ಹಿಸ್ಸೆ ಇದೆ ಎಂದರೆ ಸರಿಯಲ್ಲ. ವಾದಿಗೆ ಸೇರಬೇಕಾಗಿದ್ದ ಎಲ್ಲಾ ಆಸ್ತಿಗಳ ದಾಖಲೆಗಳನ್ನು ನನ್ನ ಹೆಸರಿಗೆ ಮಾಡಿಕೊಂಡು ಅವರಿಗೆ ವಂಚನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ವಂಚನೆ ಮಾಡಿದ್ದರಿಂದ ಆಕೆಯ ಮಕ್ಕಳ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

ಸಹಿಃ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

**(ಸಾಕ್ಷಿದಾರರ ಸಹಿ)**